ಸಮರ್ಥವಾಗಿ ಆಡಳಿತ ನಡೆಸಿದರು. ಸ್ವಾತಂತ್ರ್ಯ ಸಿಕ್ಕ ಬಳಿಕ ದೂರದೃಷ್ಟಿತ್ವದಿಂದ ಮೊದಲಿಗೆ ತಮ್ಮ ಸಂಸ್ಥಾನವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯೊಂದಿಗೆ ವಿಲೀನಗೊಳಿಸಿದ ದೇಶದ ಮೊದಲ ರಾಜ ಅವರು. ವಿಲೀನದ ಬಳಿಕವೂ ಅವರು ರಾಜಪ್ರಮುಖರಾಗಿ, ನಂತರ ರಾಜ್ಯಪಾಲರಾಗಿ ಕರ್ತವ್ಯ ನಿರ್ವಹಿಸಿದರು.

ಪ್ರತಿಯೊಬ್ಬರ ಬದುಕಿನಲ್ಲೂ ಕೆಲವೊಂದು ಘಟನೆಗಳು, ವ್ಯಕ್ತಿಗಳು ನೆರಳಿನಂತೆ ಮನಸಿನಾಳದಲ್ಲಿ ಸದಾ ಹಿಂಬಾಲಿಸುತ್ತಿರುತ್ತವೆ. ತಮ್ಮದಲ್ಲದ ತಪ್ಪಿನಿಂದ, ಕೈಮೀರಿಹೋದ ಘಟನೆಯಿಂದ, ಏನೂ ಮಾಡಲಿಕ್ಕಾಗದ ಅಸಹಾಯಕತೆಯು ಪಾಪಪ್ರಜ್ಞೆಯಾಗಿ ಮುಳ್ಳಿನಂತೆ ಚುಚ್ಚುತ್ತಿರುತ್ತದೆ. ಈ ರೀತಿಯ ಸಂಗತಿಗಳು ಜನಸಾಮಾನ್ಯರನ್ನಷ್ಟೇ ಅಲ್ಲ, ಮಹಾರಾಜರನ್ನೂ ಬಿಟ್ಟಿಲ್ಲ. ಅವರೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಂಡ ಜನರಿಗೂ ಈ ನೆರಳು ಆವರಿಸಿ ಕಾಡುತ್ತಿರುತ್ತದೆ.

ಜಯಚಾಮರಾಜ ಒಡೆಯರ್ ಮಹಾರಾಜರ ಜೀವನದಲ್ಲೂ ಈ ರೀತಿಯ ನೆರಳು ಕಾಡಿದೆ. ಅದು ಜನಸಾಮಾನ್ಯರಿಗೂ ತಟ್ಟಿದೆ. ನೆರಳಿನಂತೆ, ಕಂಡೂ ಕಾಣದಂತೆ, ಮನಸ್ಸಿನಲ್ಲಿ ಹುದುಗಿದ ನೋವಿನ ಗೆರೆಯಂತೆ ಉಳಿದುಹೋದವರು ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿ.

## ಮರೆತ ಪುಟಗಳ ಅನಾವರಣ

ಮೈಸೂರು ರಾಜಮನೆತನದ ಬಗ್ಗೆ ಅಪಾರ ಗೌರವವನ್ನು ಹೊಂದಿರುವ ಇತಿಹಾಸತಜ್ಞ, ಭಕ್ತರಹಳ್ಳಿ ಸಂತೆ ನಾರಾಯಣಸ್ವಾಮಿ ಅವರು ತಮ್ಮ ಮನೆಯಲ್ಲಿ ಮಹಾರಾಜ ಜಯಚಾಮರಾಜ ಒಡೆಯರ್ ಮತ್ತು ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿ ಅವರ ಕಪ್ಪುಬಿಳುಪಿನ ಛಾಯಾಚಿತ್ರವನ್ನು ಈಗಲೂ ಇಟ್ಟುಕೊಂಡಿದ್ದಾರೆ. ಮರೆತುಹೋದ, ತಿರುವಿಹಾಕದ ಇತಿಹಾಸದ ಪುಟವನ್ನು ತೆರೆದು ಅವರು ಮಹಾರಾಣಿಯವರ ಬಗ್ಗೆ ವಿವರ ನೀಡಿದರು.

ಹಿರಿಯ ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿ ಕುರಿತಾದ ಮಾಹಿತಿ ತಿಳಿದಿರುವುದು ಅಲ್ಪ. ಹಿಂದೆ ಬಹಳಷ್ಟು ಜನರ ಮನೆಗಳಲ್ಲಿ ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್ ಅವರು ತಮ್ಮ ಪತ್ನಿಯೊಂದಿಗೆ ಇದ್ದ ಕಪ್ಪುಬಿಳುಪಿನ ಭಾವಚಿತ್ರವನ್ನು ಅತ್ಯಂತ ಪ್ರೀತಿ ಮತ್ತು ಗೌರವದಿಂದ ಪ್ರದರ್ಶಿಸುತ್ತಿದ್ದರು. ಆ ಚಿತ್ರದಲ್ಲಿ ಮಹಾರಾಜರೊಂದಿಗೆ ಇದ್ದುದು ಹಿರಿಯ ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿ.

ಸತ್ಯಪ್ರೇಮಕುಮಾರಿ ದೇವಿ ಅವರು ಉತ್ತರಪ್ರದೇಶದ ಚರಖಾರಿ ಹಾಗೂ ಮಧ್ಯಪ್ರದೇಶದ ಜಿಗ್ನಿ ರಾಜಮನೆತನದ ರಾಜ ಪ್ರತಾಪ್ ಸಿಂಗ್ ಜುದೇವ್ ಅವರ ಸಾಕುಮಗಳು. ಪ್ರತಾಪ್ ಸಿಂಗ್ ಜುದೇವ್ ಮರಣಾನಂತರ, ಅವರ ಮಗನಾದ ಅರಿಮರ್ಧನ ಸಿಂಗ್ ಜುದೇವ್ ಕುಟುಂಬದ ಜವಾಬ್ದಾರಿ ಹೊತ್ತರು.

ಮೈಸೂರು ಅರಸು ಮನೆತನದ ಉತ್ತರಾಧಿಕಾರಿಯಾದ ಜಯಚಾಮರಾಜ ಒಡೆಯರ್ ಅವರನ್ನು ವಿದ್ಯಾವಂತರನ್ನಾಗಿ ಬೆಳೆಸಿದ್ದು ಅವರ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಮೈಸೂರು ರಾಜಮನೆತನದವರು ದಿವಾನರೊಂದಿಗೆ ಚರ್ಚಿಸಿ ರಜಪೂತ್ ಮನೆತನದ ಹೆಣ್ಣನ್ನು ಜಯಚಾಮರಾಜ ಒಡೆಯರ್ ಅವರಿಗೆ ತಂದುಕೊಳ್ಳಲು ಒಪ್ಪಿದರು.


ಪಟ್ಟಾಭಿಷೇಕ ಸಂದರ್ಭದ ಚಿತ್ರ (1940)

ಅತ್ಯಂತ ರೂಪವತಿ, ವಿದ್ಯಾಸಂಪನ್ನೆಯಾಗಿದ್ದ ಮತ್ತು ರಾಜಮನೆತನದ ಆಚಾರವಿಚಾರಗಳನ್ನು ಅರಿತಿದ್ದ ರಾಜಕುಮಾರಿ ಸತ್ಯಪ್ರೇಮಕುಮಾರಿ ದೇವಿ ಅವರೊಂದಿಗೆ ಜಯಚಾಮರಾಜ ಒಡೆಯರ್ ಅವರ ವಿವಾಹವನ್ನು ಮೇ 15, 1938ರಂದು ವಿಜೃಂಭಣೆಯಿಂದ ಮೈಸೂರಿನಲ್ಲಿ ನೆರವೇರಿಸಲಾಯಿತು.

ಅಣ್ಣನಂತಿದ್ದ ಅರಿಮರ್ಧನ್ ಸಿಂಗ್ ತಂದೆಯ ಸ್ಥಾನದಲ್ಲಿ ನಿಂತು ಕನ್ಯಾದಾನವನ್ನು ಮಾಡಿದರು. ಬಿಕನೇರ್‌ನ ಮಹಾರಾಜ, ಹೈದರಾಬಾದಿನ ನಿಜಾಮ್, ಜಿಗ್ನಿ ಮಹಾರಾಜ ಮೊದಲಾದವರು ಈ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಅನುರೂಪ ಜೋಡಿಯಾದ ವಧೂವರರು ಒಬ್ಬರಿಗೊಬ್ಬರು ಹೇಳಿ ಮಾಡಿಸಿದಂತಿದ್ದರು. ಮುಂದೆ ಮಹಾರಾಜರಾಗಬೇಕಿದ್ದ ಜಯಚಾಮರಾಜ ಒಡೆಯರ್ ಅವರು ಸಾಕಷ್ಟು ಕಲಿಯಬೇಕಿತ್ತು. ಅದಕ್ಕೆಂದು ರಾಜಮನೆತನದವರು ರಾಜದಂಪತಿಯನ್ನು ಕಲೆ, ಸಂಗೀತ ಮತ್ತು ಸಾಹಿತ್ಯದಲ್ಲಿನ ಕಲಿಕೆಗಾಗಿ ಯೂರೋಪ್‌ಗೆ ಕಳುಹಿಸಿಕೊಟ್ಟರು. ಜಯಚಾಮರಾಜ ಒಡೆಯರ್ ತಮ್ಮ ಪತ್ನಿ, ತಂದೆ–ತಾಯಿ ಮತ್ತು ಸಹೋದರಿಯರೊಂದಿಗೆ ಯೂರೋಪ್ ಪ್ರವಾಸಕ್ಕೆಂದು 13ನೇ ಜುಲೈ 1939ರಂದು ಬಾಂಬೆಯಲ್ಲಿ ಹಡಗನ್ನು ಹತ್ತಿದರು. ಅವರೊಂದಿಗೆ ಕೆಲವು ಸಂಗೀತ ವಿದ್ವಾಂಸರು ಹಾಗೂ ಸಹಾಯಕರೂ ಜೊತೆಗೂಡಿದರು. ವ್ಯಾಟಿಕನ್‌ನಲ್ಲಿ ಪೋಪ್ ಅವರ ಉಪಸ್ಥಿತಿಯಲ್ಲಿ ಸೇರಿದಂತೆ, ಯೂರೋಪಿನ ಪ್ರಮುಖ ನಗರಗಳಲ್ಲಿ ಮೈಸೂರಿನ ಕಲಾ ಪ್ರತಿಭೆಗಳ ಪ್ರದರ್ಶನ ಸಹ ನಡೆಯಿತು. ಆಗಿನ್ನೂ ಪುಟ್ಟ ಬಾಲೆಯಾಗಿದ್ದ ನೃತ್ಯಗಾರ್ತಿ ಮತ್ತು ನಟಿ ವೈಜಯಂತಿಮಾಲ ಕೂಡ ಆ ತಂಡದಲ್ಲಿದ್ದರು.

ಒಂದು ವರ್ಷದ ಸುಖ ದಾಂಪತ್ಯವನ್ನು ಕಳೆದ ರಾಜದಂಪತಿ ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್, ಸ್ವಿಡ್ಜರ್ಲೆಂಡ್, ಇಟಲಿ ಮುಂತಾದ ದೇಶಗಳನ್ನು ಸುತ್ತಿದರು. ಜಯಚಾಮರಾಜ ಒಡೆಯರ್ ಅವರು ಸಂಗೀತದ ಕುರಿತಾದ ಶಿಕ್ಷಣವನ್ನು ಪಡೆದರು. ಯೂರೋಪಿನ ಸಂಗೀತದ ಸಂಸ್ಥೆಗಳು ಹಾಗೂ ವಿದ್ವಾಂಸರನ್ನು ಭೇಟಿ ಮಾಡಿ ಚರ್ಚಿಸಿದರು. ಅವರು ಸುಮಾರು ಮೂರು ತಿಂಗಳ ಕಾಲ ಯೂರೋಪಿನಲ್ಲಿದ್ದರು.

ಅದೇ ಸಮಯದಲ್ಲಿ ಎರಡನೇ ವಿಶ್ವಯುದ್ಧ ಪ್ರಾರಂಭವಾಗಿದ್ದರಿಂದ ಯೂರೋಪಿನ ಜನಜೀವನ ಅಸ್ತವ್ಯಸ್ತಗೊಂಡಿತು. ರಾಜ ಮನೆತನದವರ ಪ್ರವಾಸ ಮೊಟಕುಗೊಂಡಿತು. ಭಾರತಕ್ಕೆ ತಕ್ಷಣ ಹೊರಟು ಬರುವುದಕ್ಕಾಗಿ ಒಂದು ವಿಮಾನವನ್ನು ಬಾಡಿಗೆಗೆ ಪಡೆದರು. ಜಯಚಾಮರಾಜ ಒಡೆಯರ್ ಅವರ ತಂದೆ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರನ್ನು ಬಿಟ್ಟು ಉಳಿದವರೆಲ್ಲ ಭಾರತಕ್ಕೆ (ಬಾಂಬೆ) 1939ರ ಅಕ್ಟೋಬರ್‌ನಲ್ಲಿ ಆಗಮಿಸಿದರು. ಬಾಂಬೆಯಿಂದ ಮೈಸೂರಿಗೆ ಬಂದವರೇ ದಸರಾ ಮಹೋತ್ಸವದಲ್ಲಿ ಭಾಗಿಯಾದರು.

ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರು ಅನಾರೋಗ್ಯಪೀಡಿತರಾಗಿ ಇನ್ನೂ ಮೂರು ತಿಂಗಳ ಕಾಲ ಯೂರೋಪ್‌ನಲ್ಲಿಯೇ ಉಳಿಯಬೇಕಾಯಿತು. ಆದರೂ ಅವರ ಆರೋಗ್ಯ ಸುಧಾರಣೆಯಾಗದೇ, ಯುದ್ಧದ ಕಾರಣದಿಂದಾಗಿ ವಿಮಾನದಲ್ಲಿ ಅವರು ಬಾಂಬೆಗೆ ಜನವರಿ 2, 1940ರಂದು ಆಗಮಿಸಿದರು. ಮುಂಬೈನ ತಾಜ್ ಹೋಟೆಲ್ ಹಿಂಬದಿಯಲ್ಲಿರುವ 'ಆಂಕೋರೇಜ್' ಎಂಬ ಮೈಸೂರು ರಾಜಮನೆತನದವರ ಗೆಸ್ಟ್ ಹೌಸ್‌ನಲ್ಲಿ ತಂಗಿದರು. ನ್ಯುಮೋನಿಯಾದಿಂದ ಬಳಲುತ್ತಿದ್ದ